

ಬದುಕನ್ನು ಸಂಕೀರ್ಣವಾಗಿ ನವ್ಯರು ನೋಡಿದರು. ಬದಲಾದ ಜೀವನಕ್ರಮಕ್ಕೆ ತಕ್ಕಂತೆ ತಮ್ಮ ಕಥನಕ್ರಮಗಳನ್ನು, ನುಡಿಗಟ್ಟುಗಳನ್ನು ಬದಲಿಸಿಕೊಂಡರು. ಎಪ್ಪತ್ತರ ದಶಕದಲ್ಲಿ ಸಂಪೂರ್ಣವಾಗಿ ಮೇಲಿನ ಲಕ್ಷಣಗಳು ಮುಂದಡಿ ಇಟ್ಟವು. ನವ್ಯರನ್ನು ಎಷ್ಟೇ ಹೊಗಳಿದರೂ, ಅವರು ಹಿಂದಣ ಹೆಜ್ಜೆಗಳನ್ನು ಸಂಪೂರ್ಣವಾಗಿ ಮರೆಯಲು ಸಾಧ್ಯವಿರಲಿಲ್ಲ; ಅಸಾಧ್ಯವೂ ಕೂಡ. ಆಗಲೇ ಹೇಳಿದ ಹಾಗೆ ಮನುಷ್ಯ ಮತ್ತು ಸಮಾಜವನ್ನು ಗ್ರಹಿಸುವ ನೋಟಕ್ರಮಗಳನ್ನು ಬದಲಿಸಿಕೊಂಡರು. ಅದರಲ್ಲೂ ಗ್ರಾಮ, ನಗರ, ಹೆಣ್ಣು, ಜಾತಿ, ಧರ್ಮ, ರಾಜಕಾರಣ ಮುಂತಾದ ಕಾಳಜಿಗಳನ್ನು ಕರ್ನಾಟಕದ ಮತ್ತು ಭಾರತದ ತಮ್ಮ ಸದ್ಯಕಾಲೀನ ಪಲ್ಲಟಗಳಿಗೆ ತಕ್ಕ ಹಾಗೆ ಕಥನ ಮಾರ್ಗದ ವಸ್ತು–ವಿನ್ಯಾಸಗಳನ್ನು ರೂಪಿಸಿಕೊಂಡರು. ಆರಂಭದಲ್ಲಿ ಲಂಕೇಶ, ತೇಜಸ್ವಿ, ಕೃಷ್ಣ ಅವರಂತೂ ಶೂದ್ರ ಬದುಕಿನ ಗ್ರಾಮ ಮತ್ತು ಮನುಷ್ಯನ ಅಂತರಂಗಳನ್ನು ತೀವ್ರವಾಗಿ ಶೋಧಿಸಿದರು. ಈ ಸಂಗತಿಗಳು ಹಿಂದೆ ಇರಲಿಲ್ಲವೆಂದಲ್ಲ. ಆದರೆ, ಈ ಮೂವರು ಭಾಷೆಗೆ ಮತ್ತು ಮನುಷ್ಯನಿಗೆ ಇದ್ದ ಮಡಿವಂತಿಕೆಯನ್ನು ಮುರಿದರು. ಭಾರತದ ಇಪ್ಪತ್ತನೇ ಶತಮಾನದ ರಾಜಕೀಯ ಮತ್ತು ಸಾಮಾಜಿಕ ತತ್ವಗಳನ್ನು ಸರಿಯಾದ ರೀತಿಯಲ್ಲಿ ಅರಿತುಕೊಂಡ ಈ ಸಾಲಿನ ಅನೇಕ ಕಥನಕಾರರು ಗ್ರಾಮ ಮತ್ತು ನಗರಗಳ ಒಳರಾಜಕಾರಣ, ಮನುಷ್ಯನ ಬೆತ್ತಲುಗಳನ್ನು ಬಟಾಬಯಲುಗೊಳಿಸಿದರು. ಕಾಮವನ್ನು ಕೇವಲ ಚಕಿತಗೊಳಿಸಲು ಯತ್ನಿಸದೇ, ಅದು ಮನುಷ್ಯ ಬದುಕಿನ ನಿರ್ಧಾರಿತ ತತ್ವವೆಂದು ಭಾವಿಸಲು ಯತ್ನಿಸಿದರು. ಇದರಲ್ಲಿ ಎಲ್ಲರೂ ಸಂಪೂರ್ಣ ಸಫಲರಾಗಿದ್ದಾರೆ ಎಂದು ಹೇಳಲಾರೆ. ಆರಂಭ ಕಾಲದಿಂದಲೇ 'ಕಾಮ' ಒಂದು ತತ್ವವಾಗಿ ಹೇಗೆ ಒಡಮೂಡಿದೆ ಎಂಬುದನ್ನು ಕನ್ನಡ ವಿಮರ್ಶೆ ತಲಸ್ಪರ್ಶಿಯಾಗಿ ಅಧ್ಯಯನ ನಡೆಸಲು ಇನ್ನೂ ಅವಕಾಶಗಳಿವೆ. ಆಲನಹಳ್ಳಿ ಕೃಷ್ಣ ಅವರು ನವ್ಯದ ಮಿತಿಯನ್ನು ಆರಂಭದಲ್ಲೇ ಅರಿತುಕೊಂಡರು. 'ನವ್ಯ' ಮತ್ತು 'ನೆಲದ ಕಸುವು' ಇವೆರಡನ್ನೂ ಉಳಿದ ಕಥೆಗಾರರಂತೆ ಸಮತೋಲನದಿಂದ ನೋಡಲು ಬಯಸಿದ್ದು ಸರಿ. ಅವರ 'ತಪ್ತ' ಕಥೆ ಭಾಷೆಯನ್ನು ವಿಶಿಷ್ಟವಾಗಿ ಕಟೆದು ನಿಲ್ಲಿಸಿದರೂ, ಆಶಯದ ದೃಷ್ಟಿಯಿಂದ ಗೊಂದಲವನ್ನು ಅನುಭವಿಸಿಬಿಡುತ್ತದೆ. ಬಹುಪಾಲು ಇದೇ ವಸ್ತುವನ್ನು ಆರಿಸಿಕೊಂಡ ಲಂಕೇಶರ 'ಕೆರೆಯ ನೀರನು ಕೆರೆಗೆ ಚೆಲ್ಲಿ' ಕಥೆಯಲ್ಲಿ ಗೌರಿಗೆ ಸಿಕ್ಕ ನೆಲದ ಕಸುವಿನ ಸ್ವಾತಂತ್ರ್ಯ 'ತಪ್ತ'